ಊ. ರಾಷ್ಟ್ರೀಯ ಅರಣ್ಯ ನೀತಿಯ ಪ್ರಕಾರ ಅರಣ್ಯ ಇಲಾಖೆಯ ಅನುಮತಿ ಪಡೆದು ಗಣಿ ಗುತ್ತಿಗೆ ನೀಡಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಆಕ್ರಮವಆಗಿ ಮರಳು ತೆಗೆಯುತ್ತಿರುವ ವಿಚಾರ

1801(2322): ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಹಲಗೂರು ಹೋಬಳಿಯ ತೊರೆಕಾಡಿನ ಹಳ್ಳಿಯ ಹತ್ತಿರ ಶಿಂಷಾ ನದಿಯ ಸೇತುವೆ ಕೆಳಭಾಗದಲ್ಲಿ ಮರಳು ತೆಗೆಯಲು ಗುತ್ತಿಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ, ಯಾರಿಗೆ ಗುತ್ತಿಗೆ ನೀಡಲಾಗಿದೆ; (ವಿವರ ನೀಡುವುದು)

ಆ. ಸದರಿ ಗುತ್ತಿಗೆದಾರರು ಮರಳನ್ನು ಎತ್ತುವಳಿ ಮಾಡುವ ಸ್ಥಳವನ್ನು ಬುಟ್ಟು ಬೃಹತ್ ಯಂತ್ರಗಳನ್ನು ಬಳಸಿ ಸೇತುವೆಯ ಕೆಳಭಾಗದ ಅಡಿಯಲ್ಲಿ ಅಳವಾಗಿ ತೋಡಿ ಮರಳು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಈ ರೀತಿ ಪ್ರತಿದಿನ ಮರಳು ತೆಗೆಯುತ್ತಿರುವುದರಿಂದ ಸೇತುವೆಯ ತಳಭಾಗವು ನೀರಿನ ಕೊರತೆಗೆ ಒಳಗಾಗುವುದಿಲ್ಲವೇ;

ಈ. ಕಾನೂನು ಉಲ್ಲಂಘನೆ ಮಾಡಿ ನಿಯಮ ಬಾಹಿರವಾಗಿ ಮರಳು ತೆಗೆಯುತ್ತಿರುವವರ ಈ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಅ. ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿಯ ತೊರೆಕಾಡನಹಳ್ಳಿಯ ಹತ್ತಿರ ಶಿಂಷಾ ನದಿಯ ಸೇತುವೆ ಕೆಳಭಾಗದಲ್ಲಿ ಮರಳು ತೆಗೆಯಲು ಗುತ್ತಿಗೆ ನೀಡಿರುವುದಿಲ್ಲ. ಆದರೆ, ಶ್ರೀ ಬಸವರಾಜು ಎಂಬುವವರಿಗೆ ಮಳವಳ್ಳಿ ತಾಲ್ಲೂಕು, ತೊರೆಕಾಡನಹಳ್ಳಿ ಗ್ರಾಮದಲ್ಲಿನ ಶಿಂಷಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಸೇತುವೆಯಿಂದು ಸುಮಾರು 1000 ಅಡಿ ದೂರದಲ್ಲಿ ಶಿಂಷಾ ನದಿ ಪಾತ್ರದಲ್ಲಿ 8-00 ಎಕರೆ ಪ್ರದೇಶದಲ್ಲಿ ಸಾಮಾನ್ಯ ಮರಳು ತೆಗೆಯಲು ದಿನಾಂಕ: 23.09.2002ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮಾತ್ರ ಮರಳು ಗುತ್ತಿಗೆಯನ್ನು ಹರಾಜು ಮೂಲಕ ನೀಡಲಾಗಿದೆ.

ಆ. ಈ ವಿಷಯವು ಗಮನಕ್ಕೆ ಬಂದಿದ್ದು, ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ.

ಇ. ಸೇತುವೆಯ ತಳಭಾಗವು ನೀರಿನ ಕೊರತಕ್ಕೆ ಒಳಗಾಗುವ ಸಾಧ್ಯತೆ ಇದೆ. ಸೇತುವೆಯ ಹತ್ತಿರ ಮರಳು ತೆಗೆಯುವುದನ್ನು ನಿಲ್ಲಿಸಲಾಗಿದೆ.

ಈ. ಈಗಾಗಲೇ ಸದರಿಯವರಿಗೆ ನೋಟೀಸ್ ಜಾರಿ ಮಾಡಿ ಮರಳು ತೆಗೆಯುವುದನ್ನು ನಿಲ್ಲಿಸಲಾಗಿದೆ. ಅನಧಿಕೃತವಾಗಿ ಮರಳು ತೆಗೆಯುವುದನ್ನು ತಡೆದು ದಂಡ ವಸೂಲಿ ಮಾಡಲಾಗಿದೆ.

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ

1802(2323): ಶ್ರೀ ಜಗದೀಶ್‌ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಇದುವರೆಗೆ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆ. ಜಿಲ್ಲಾವಾರು ವಿವರ ನೀಡುವುದು;

ಆ. ಹಾಗಿದ್ದರೆ, ಯಾವ ಯಾವ ಇಲಾಖೆಗಳಲ್ಲಿ ತುಂಬಲಾಗಿದೆ. ವಿವರ ನೀಡುವುದು (ಜಿಲ್ಲಾವಾರು)

ಇ. ಇನ್ನೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದೇ ಇರುವ ಇಲಾಖೆಗಳು ಯಾವುವು. ವಿವರ ನೀಡುವುದು

ಈ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದೇ ಇರುವ ಇಲಾಖೆಗಳ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು.

ಉ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಎಲ್ಲಿಯವರೆಗೆ ಗಡುವು ನೀಡಲಾಗಿದೆ. ಈ ಗಡುವನ್ನು ವಿಸ್ತರಿಸಲಾಗುವುದೆ;

ಊ. ಬ್ಯಾಕ್‌ಲಾಗ್ ಹುದ್ದೆ ತುಂಬಲು ಯಾವ ಮಾನದಂಡವನ್ನು ಅನುಸರಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಇಲ್ಲಿಯವರೆಗೆ ಸರಿಸುಮಾರು 17,100 ಹಿಂಬಾಕಿ ಹುದ್ದೆಗಳನ್ನು ಗುರುತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸುಮಾರು 13,300 ಹುದ್ದೆಗಳನ್ನು ಪ್ರಕಟಿಸಿದ್ದು, ಆಯ್ಕೆಯ ಪ್ರಕ್ರಿಯೆಯೂ ವಿವಿಧ ಹಂತದಲ್ಲಿದೆ. ಈಗಾಗಲೇ ಪ್ರಕಟಿಸಲಾದ 13,300 ಹುದ್ದೆಗಳ ಪೈಕಿ ಸುಮಾರು 5,300 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ನೇಮಕಾತಿ ಆದೇಶಗಳು ಜಾರಿಮಾಡುವ ಹಂತದಲ್ಲಿವೆ. ಜಿಲ್ಲಾವಾರು ಮಾಡದೆ, ಇಲಾಖಾವಾರು ನಿಗಮಗಳವಾರು ಸಾರ್ವಜನಿಕ ಉದ್ದಿಮೆಗಳು ಇತ್ಯಾದಿಗಳಲ್ಲಿ ಹುದ್ದೆಗಳನ್ನು ಗುರುತಿಸುವ ಮತ್ತು ಆಯ್ಕೆ ಮಾಡಲಾಗುತ್ತಿದೆ.

ಈ. ನೇಮಕಾತಿ ಪ್ರಾಧಿಕಾರಿಗಳು ಉದ್ದೇಶಪೂರ್ವಕವಾಗಿ ನಿರ್ಲಕ್ಷತೆ ಮತ್ತು ವಿಳಂಬ ಮಾಡಲು ಪ್ರಯತ್ನ ಪಟ್ಟಂತೆ ಪ್ರಕರಣಗಳನ್ನು ವರದಿ ಮಾಡಿದ ಅಥವಾ ಪತ್ತೆ ಮಾಡಿದ ಪ್ರಕರಣಗಳ ಮೇಲೆ ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೇ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ ತಿದ್ದುಪಡಿ) ನಿಯಮಗಳು 2000 ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

ಉ. ಹಿಂಬಾಕಿ ಹುದ್ದೆಗಳನ್ನು ದಿ: 31.12.2002ರ ಒಳಗೆ ತುಂಬಲು ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

ಊ. ಸರ್ಕಾರಿ ಅಧಿಸೂಚನೆ ದಿ: 21.11.2001ರ ರೀತ್ಯಾ ಹಿಂಬಾಕಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಜಾಗತಿಕ ಹೂಡಿಕೆದಾರರ ಸಭೆ

1803(2324): ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಜಾಗತಿಕ ಹೂಡಿಕೆದಾರರ ಸಭೆ ಎಂದು ನಡೆಯಿತು.

ಆ. ಇದರಿಂದ ಎಷ್ಟು ಯೋಜನೆಗಳಿಗೆ ಎಷ್ಟು ಬಂಡವಾಳ ಹರಿದು ಬಂದಿದೆ.